# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 547
**ಸದಸ್ಯರ ಹೆಸರು** : ಡಾಃ ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸುವ ದಿನಾಂಕ** : 22-12-2022.
**ಉತ್ತರಿಸುವವರು** : ಮಾನ್ಯ ಮುಖ್ಯಮಂತ್ರಿರವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಪ್ರದೇಶದಲ್ಲಿ ಮೂಲ ಗ್ರಾಮ ಠಾಣಾ ಪ್ರದೇಶವನ್ನು ಯಾವಾಗ ನಿಗಧಿ ಪಡಿಸಲಾಗಿದೆ (ವಿವರ ನೀಡುವುದು) | ರಾಜ್ಯದಲ್ಲಿ ಮೂಲ ಸರ್ವೆ ಮತ್ತು ರೀ ಸರ್ವೆ ಕಾಲಕ್ಕೆ ಎಲ್ಲಾ ಗ್ರಾಮಗಳ ಕೃಷಿ ಜಮಿನುಗಳಲ್ಲಿ ಅಳತೆ ಮಾಡಿ ಗಡಿ ಗುರ್ತಿಸಿ ನಂತರ ಉಳಿದ ಜನವಸತಿ ಪ್ರದೇಶಗಳನ್ನು (ಗ್ರಾಮ ಠಾಣಾವನ್ನು) ಜಮೀನು ಸ್ಥಿತಿಯಂತೆ ಗುರ್ತಿಸಿ, ಗ್ರಾಮ ನಕಾಶೆಯಲ್ಲಿ ದಾಖಲಿಸಲಾಗಿದೆ.<br>**ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಕೆಳಕಂಡ ವರ್ಷಗಳಲ್ಲಿ ದಾಖಲೆ ತಯಾರಿಕೆ ಕಾರ್ಯ ಪೂರ್ಣವಾಗಿರುತ್ತದೆ.** |

| ಪ್ರಾಂತ್ಯ | ಮೂಲ ಸರ್ವೇ | ರಿ-ಸರ್ವೇ |
|---|---|---|
| ಹಳೇ ಮೈಸೂರು ಪ್ರಾಂತ್ಯ | 1863-1899 | 1900-1917 |
| ಮುಂಬೈ ಪ್ರಾಂತ್ಯ | 1840-1863 | 1906-1921 |
| ಮದರಾಸು ಪ್ರಾಂತ್ಯ | 1863-1904 | 1923-1935 |
| ಹೈದರಾಬಾದ್ ಪ್ರಾಂತ್ಯ | 1875-1888 | 1906-1916 |
| ಕೊಡಗು ಪ್ರಾಂತ್ಯ | 1806-1816 | 1906-1912 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದ ಎಲ್ಲಾ ಗ್ರಾಮಗಳನ್ನು ಸರ್ವೆ ಮಾಡಿಸಿ ಗ್ರಾಮಠಾಣಾ ಪ್ರದೇಶವನ್ನು ವಿಸ್ತರಿಸಲು ಸರ್ಕಾರ ಕೈಗೊಂಡ ಕ್ರಮ ಗಳೇನು; | ದಿನಾಂಕ 24-4-2020 ರಂದು ಕೇಂದ್ರ ಸರ್ಕಾರವು ರಾಜ್ಯದ ಗ್ರಾಮಗಳಲ್ಲಿನ ಜನ ವಸತಿ ಪ್ರದೇಶಗಳ ಆಸ್ತಿಗಳನ್ನು ಅಳತೆ ಮಾಡಿ, ಹಕ್ಕು ದಾಖಲೆ ವಿತರಿಸುವ ಉದ್ದೇಶದಿಂದ "**ಸ್ವಮಿತ್ವ**" ಯೋಜನೆಯನ್ನು ಜಾರಿಗೊಳಿಸಿರುತ್ತದೆ.<br><br>ಭಾರತೀಯ ಸರ್ವೇಕ್ಷಣಾಲಯ ಸಂಸ್ಥೆ ವತಿಯಿಂದ 5 ಜಿಲ್ಲೆಗಳಲ್ಲಿ ಮರು ಭೂಮಾಪನ ಹಾಗೂ ಸ್ವಮಿತ್ವ ಯೋಜನೆಯಡಿಯಲ್ಲಿ ಜಮೀನು ಸ್ಥಿತಿಯಂತೆ ವಿಸೃತ ಗ್ರಾಮಠಾಣಾ ಮತ್ತು 10 ಕ್ಕಿಂತ ಹೆಚ್ಚಿನ ಮನೆಗಳಿರುವ ಜನ ವಸತಿ ಪ್ರದೇಶವನ್ನು ಡ್ರೋನ್ ಮೂಲಕ ಅಳತೆ ಮಾಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಮನ್ವಯೊಂದಿಗೆ ಹಕ್ಕು ದಾಖಲೆಗಳನ್ನು ಸಿದ್ಧಪಡಿಸಿ ವಿತರಿಸಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂ.RD 9 SSC 2022, Date:-4-2-2022 ರನ್ವಯ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಸ್ವಮಿತ್ವ ಹಾಗೂ ಮರು ಭೂಮಾಪನ ಯೋಜನೆಯಡಿ ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ಡ್ರೋನ್ ಮೂಲಕ ಕ್ರಮ ವಹಿಸಲು ಅನುಮೋದನೆಯಾಗಿದೆ.<br><br>ಪ್ರಸ್ತುತ ಸ್ವಮಿತ್ವ ಯೋಜನೆಯಡಿಯಲ್ಲಿ ರಾಜ್ಯದ ಸುಮಾರು 2683 ಗ್ರಾಮಗಳಲ್ಲಿ ಡ್ರೋನ್ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, 2194 ಗ್ರಾಮಗಳಲ್ಲಿ ಸುಮಾರು 7 ಲಕ್ಷ ಕರಡು ಪಿ.ಆರ್.ಕಾರ್ಡ್ ಗಳನ್ನು ಸೃಜಿಸಿ ವಿತರಿಸಲಾಗಿದೆ. |
| ಇ) | ಗ್ರಾಮೀಣ ಪ್ರದೇಶದಲ್ಲಿ ಜನವಸತಿ ಪ್ರದೇಶವು ವಿಸ್ತಾರವಾಗಿರುವುದರಿಂದ ಮೂಲ ಗ್ರಾಮಠಾಣಾವನ್ನು ತುರ್ತಾಗಿ ವಿಸ್ತರಿಸಲು ಸರ್ಕಾರ ಕೈಗೊಳ್ಳುವ ಕ್ರಮ ಗಳೇನು? (ವಿವರ ನೀಡುವುದು) | |

ಸಂಖ್ಯೆ: ಗ್ರಾಅಪ 360 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ